ಕರ್ನಾಟಕ ಸರ್ಕಾರ

ಸಂ.ಡಿಟಿಇ/ 08 /ಎಸಿಎಂ(1)/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ:22-07-2019.

-:: ಜ್ಞಾಪನ ::-

**ವಿಷಯ:-** ಸಿಇಟಿ-2019ರ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ನಡೆಸುವ ದಾಖಲಾತಿ ಪರಿಶೀಲನೆ ಮತ್ತು ಸೀಟು ಹಂಚಿಕೆ ಪ್ರಕ್ರಿಯೆ ಕಾರ್ಯಕ್ಕೆ ಉಪನ್ಯಾಸಕರನ್ನು ನೇಮಿಸುವ ಬಗ್ಗೆ.

**ಉಲ್ಲೇಖ:-**
1. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂ. ಇಡಿ/ಕೆಇಎ/ಎ-1/ಸಿಆರ್19/ನೋಡಲ್/2019, ದಿ:15-05-2019.
2. ಈ ಕಛೇರಿ ಸಮಸಂಖ್ಯೆ ಜ್ಞಾಪನಾ ಪತ್ರ ದಿ:21-05-2019.
3. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ ಇವರ ಪತ್ರ ಸಂ. ಸಪಾವಿ/ಇಎಸ್‌ಟಿ/2019-20/284, ದಿ:01-07-2019.

-0000000-

2019-20ನೇ ಸಾಲಿನ ಯುಜಿಸಿಇಟಿ, ಡಿಸಿಇಟಿ ಮತ್ತು ಪಿಜಿಸಿಇಟಿ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲನೆ ಮತ್ತು ಸೀಟು ಹಂಚಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಾಯಕ ಕೇಂದ್ರದಲ್ಲಿ ಸಹಾಯಕ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ನೇಮಿಸಿ ಸರ್ಕಾರಿ ಪಾಲಿಟೆಕ್ನಿಕ್‌ನ ಉಪನ್ಯಾಸಕರುಗಳನ್ನು ಉಲ್ಲೇಖ(2)ರ ಈ ಕಛೇರಿ ಜ್ಞಾಪನ ಪತ್ರದಲ್ಲಿ ನಿಯೋಜಿಸಲಾಗಿತ್ತು. ಆದರೆ, ಉಲ್ಲೇಖ(3)ರ ಪ್ರಾಂಶುಪಾಲರ ಪತ್ರದಲ್ಲಿ ವಿದ್ಯಾರ್ಥಿಗಳ ಪಾಠ ಪ್ರವಚನ ಮತ್ತು ಫಲಿತಾಂಶದ ಹಿತದೃಷ್ಟಿಯಿಂದ ನೇಮಿಸಲಾಗಿದ್ದ ಉಪನ್ಯಾಸಕರ ಬದಲಾಗಿ ಈ ಕೆಳಕಂಡ ಉಪನ್ಯಾಸಕರನ್ನು ನೇಮಿಸಲು ಕೋರಿರುವುದರಿಂದ ನೇಮಿಸಲಾಗಿದ್ದ ಉಪನ್ಯಾಸಕರ ಬದಲಾಗಿ ಈ ಕೆಳಕಂಡ ಉಪನ್ಯಾಸಕರನ್ನು ಸಹಾಯಕ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ನೇಮಿಸಲಾಗಿದೆ.

| ಕ್ರ. ಸಂ | ನೇಮಿಸಲಾಗಿದ್ದ ಉಪನ್ಯಾಸಕರ ಹೆಸರು ಶ್ರೀಯುತರಾದ | ಬದಲಾವಣೆ ಮಾಡಿ ನೇಮಿಸಲಾದ ಉಪನ್ಯಾಸಕರ ಹೆಸರು ಶ್ರೀಯುತರಾದ | ಕಾರ್ಯನಿರ್ವಹಿಸಬೇಕಾಗಿರುವ ಸಹಾಯ ಕೇಂದ್ರದ ಹೆಸರು |
|---|---|---|---|
| 1 | 2 | 3 | 4 |
| 1. | ರಾಜ್‌ಕುಮಾರ್.ಟಿ.ತಾಳಿಕೋಟೆ, ಹಿ.ಶ್ರೇ.ಉಪನ್ಯಾಸಕರು, ಸಿವಿಲ್ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ | ಹೆಚ್.ಐ.ದೇಗಿನಾಳ, ಆ.ಶ್ರೇ. ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಝಳಕಿ | ಬಿ.ಎಲ್.ಡಿ.ಇ.ಎ ವಿ.ಪಿ ಡಾ॥ ಪಿ.ಜಿ.ಹಳಕಟ್ಟಿ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ಆಶ್ರಂ ರೋಡ್, ವಿಜಯಪುರ |

ಮೇಲ್ಕಂಡಂತೆ ನೇಮಿಸಲಾದ ಉಪನ್ಯಾಸಕರು ಕಾಲಂ(4)ರಲ್ಲಿ ತೋರಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಾಯಕ ಕೇಂದ್ರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನೇಮಕ ಮಾಡಿರುವ ನೋಡಲ್ ಅಧಿಕಾರಿಯವರಲ್ಲಿ <u>ದಿನಾಂಕ:23-07-2019</u>ರಂದು ವರದಿ ಮಾಡಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. **ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರು ಪ್ರಕಟಿಸುವ ದಾಖಲಾತಿ ಪರಿಶೀಲನಾ ವೇಳಾಪಟ್ಟಿಯಲ್ಲಿನ ದಿನಾಂಕಗಳಂದು ಮಾತ್ರ ದಾಖಲಾತಿ ಪರಿಶೀಲನೆಗೆ ಹಾಜರಾಗಿ ಕಾರ್ಯನಿರ್ವಹಿಸುವುದು ಹಾಗೂ ದಾಖಲಾತಿ ಪರಿಶೀಲನೆ ಇಲ್ಲದ ದಿನದಂದು ತಮ್ಮ ಮಾತೃ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ. ದಾಖಲಾತಿ ಪರಿಶೀಲನೆ ಮತ್ತು ಸೀಟು ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಸಂಬಂಧಪಟ್ಟ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ವರದಿ ಮಾಡಿಕೊಳ್ಳತಕ್ಕದ್ದು.**

*ಮೇಲ್ಕಂಡ ಸಂಸ್ಥೆಗಳ ಪ್ರಾಂಶುಪಾಲರು ತಮ್ಮ ಸಂಸ್ಥೆಯ ವತಿಯಿಂದ ನಿಯೋಜಿಸಲಾದ ಉಪನ್ಯಾಸಕರ ಪೂರ್ಣ ವಿವರವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು (ದೂರವಾಣಿ ಸಂ. 080-23462599, 23462758, 23564583 ಹಾಗೂ ಫ್ಯಾಕ್ಸ್ ಸಂ. 080-23461576) ಇವರಿಗೆ ಕಳುಹಿಸುವುದು.*

ನಿರ್ದೇಶಕರು

ಗೆ,

1. *ಮೇಲ್ಕಂಡ ಉಪನ್ಯಾಸಕರುಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರ ಮುಖಾಂತರ.*

2. ಮೇಲ್ಕಂಡ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಈ ಜ್ಞಾಪನಾ ತಲುಪಿದ ಕೂಡಲೇ ತ್ವರಿತಗತಿಯಲ್ಲಿ ಮೇಲ್ಕಂಡಂತೆ ಕ್ರಮ ತೆಗೆದುಕೊಳ್ಳುವುದು.

ಪ್ರತಿ:

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
2. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
4. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ನಿರ್ದೇಶಕರ ಆಪ್ತ ಶಾಖೆಗೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಎಸ್‌ಟಿ(8) ವಿಭಾಗಕ್ಕೆ,
7. ಕಛೇರಿ ಪ್ರತಿ.

ಪ್ರತಿ ಮಾಹಿತಿಗಾಗಿ:

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.